# ಕನ್ನಡದವಳು
## ಗಡಿಮೀರಿ ಬೆಳೆವವಳು

■ ಪದ್ಮನಾಭ ಭಟ್



**ಕೆ.ಜಿ.ಎಫ್ ಸಿನಿಮಾದ ರೀನಾಳ ಕಣ್ಣ ಮಿಂಚು ಚಿತ್ರಮಂದಿರದ ಕತ್ತಲಲ್ಲಿ ಹೊಳೆಯುತ್ತಿದೆ. ಈ ಪಾತ್ರದಲ್ಲಿ ನಟಿಸಿದ ಶ್ರೀನಿಧಿ ಶೆಟ್ಟಿಗಿದು ಯಶಸ್ಸಿನ ಸಂಭ್ರಮದ ಕಾಲ. ದೊಡ್ಡ ಯಶಸ್ಸಿನ ನಂತರವೂ ನೆಲಬಿಡದ ವಿನಯವನ್ನು ಮೈಗೂಡಿಸಿಕೊಂಡಿರುವ ಈ ಮಂಗಳೂರಿನ ಹುಡುಗಿಯ ಜೊತೆಗಿನ ಮಾತುಕತೆ ಇಲ್ಲಿದೆ.**

‘ಈ ಹುಡುಗಿ ಇನ್ನು ಕನ್ನಡದವ್ರ ಕೈಗೆ ಸಿಗಲ್ಲ. ಬಾಲಿವುಡ್‌ಗೆ ಜಂಪ್ ಮಾಡ್ತಾಳೆ’ ‘ಕೆ.ಜಿ.ಎಫ್.’ ಸಿನಿಮಾದ ನಾಯಕಿ ಶ್ರೀನಿಧಿ ಶೆಟ್ಟಿ ಅವರ ಕುರಿತು ಹೀಗೊಂದು ಮಾತು ಗಾಂಧಿನಗರದ ಗಲ್ಲಿಗಳಲ್ಲಿ ಹರಿದಾಡುತ್ತಲೇ ಇದೆ. ಆದರೆ ಆ ಮಾತುಗಳನ್ನೆಲ್ಲ ನಗುನಗುತ್ತಲೇ ಗಾಳಿಯಲ್ಲಿ ಊದಿಬಿಡುವ ಶ್ರೀನಿಧಿ ಮಾತ್ರ, ‘ನಾನು ಕನ್ನಡದ ಹುಡುಗಿ. ಕನ್ನಡತಿಯಾಗಿಯೇ ಇರುತ್ತೇನೆ’ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಹಾಗೆಂದು ಬೇರೆ ಭಾಷೆಯ ಸಿನಿಮಾಗಳಲ್ಲಿ ನಟಿಸುವುದಿಲ್ಲ ಎಂದು ಅವರು ಖಂಡಿತ ಪ್ರತಿಜ್ಞೆ ಮಾಡಿಲ್ಲ. ‘ನಾನು ಹುಟ್ಟಿದ್ದು, ಬೆಳೆದಿದ್ದೆಲ್ಲ ಮಂಗಳೂರಿನಲ್ಲಿ. ಕಳೆದ ಹನ್ನೆರಡು ವರ್ಷಗಳಿಂದ ಬೆಂಗಳೂರಿನಲ್ಲಿದ್ದೇನೆ. ಈ ಎರಡೂ ಊರುಗಳು ನನ್ನವು. ಎಂದಿಗೂ ನನ್ನವಾಗಿಯೇ ಇರುತ್ತವೆ. ಆದರೆ ಒಳ್ಳೆಯ ಪಾತ್ರ ಯಾವುದೇ ಭಾಷೆಯಲ್ಲಿ ಸಿಗಲಿ, ಯಾರದೇ ಸಿನಿಮಾದಲ್ಲಿ ಸಿಗಲಿ ಖಂಡಿತ ನಟಿಸುತ್ತೇನೆ. ಸಿನಿಮಾಗೆ ಭಾಷೆ ಒಂದು ತೊಡಕಲ್ಲ ಎಂದು ನಮ್ಮ ಕೆ.ಜಿ.ಎಫ್. ಸಿನಿಮಾವೇ ಸಾಬೀತು ಮಾಡಿದೆಯಲ್ಲ’ ಎಂದು ‘ರೀನಾ’ ಪಾತ್ರದ ಸಿಡುಕಿ ಇವರೇನಾ ಎಂದು ಸಂದೇಹ ಬರುವಷ್ಟು ಸುಂದರವಾಗಿ ನಕ್ಕರು.

ಈಗ ಶ್ರೀನಿಧಿ, ಯಶಸ್ಸಿನ ತುದಿಯಲ್ಲಿದ್ದಾರೆ. ಕೆ.ಜಿ.ಎಫ್. ಸಿನಿಮಾಗೆ, ಅವರ ಪಾತ್ರಕ್ಕೆ ದೇಶದಾದ್ಯಂತ ದೊರೆಯುತ್ತಿರುವ ಪ್ರಶಂಸೆಗಳು ಅವರ ಖುಷಿಯ ಮೇರೆಯನ್ನು ಮುರಿದುಹಾಕಿವೆ. ಆದರೆ ಈ ಯಶಸ್ಸಿನ ಆಚೆಗೂ ‘ನಾನು ಮೊದಲಿನ ಶ್ರೀನಿಧಿಯಾಗಿಯೇ ಇದ್ದೀನಿ’ ಎಂದೇ ಅವರು ಹೇಳಿಕೊಳ್ಳುತ್ತಾರೆ.

‘ನನ್ನ ಆರು ವರ್ಷ, ಇಡೀ ತಂಡದ ಎಂಟು ವರ್ಷಗಳನ್ನು ಈ ಸಿನಿಮಾಗೆ ಕೊಟ್ಟಿದ್ದೀವಿ. ಇದು ಇಡೀ ತಂಡದ ಶ್ರಮದಿಂದ ನಿರ್ಮಾಣವಾದ ಸಿನಿಮಾ. ಹಾಗಾಗಿ ಇದರ ಯಶಸ್ಸೂ ಇಡೀ ತಂಡಕ್ಕೇ ಸಲ್ಲಬೇಕು. ಇಂಥ ದೊಡ್ಡ ಪ್ರಯತ್ನದಲ್ಲಿ ನಾನೂ ಭಾಗಿಯಾಗಿದ್ದೇನೆ ಎಂಬುದು ಹೆಮ್ಮೆಯ ಸಂಗತಿ’ ಎನ್ನುತ್ತಾರೆ ಅವರು. ಆದರೆ ಈ ಸಿನಿಮಾಗೆ ಸಹಿ ಮಾಡಬೇಕಾದರೆ ಅವರಿಗೆ ಇದು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಹೆಸರು ಮಾಡುತ್ತದೆ ಎಂಬ ಕಲ್ಪನೆಯೂ ಇರಲಿಲ್ಲ.

‘ನಾನು ಸಹಿ ಮಾಡಿದ ಸಂದರ್ಭದಲ್ಲಿ ಇದೊಂದು ಪ್ಯಾನ್ ಇಂಡಿಯಾ ಸಿನಿಮಾ ಆಗುತ್ತದೆ. ಐದು ಭಾಷೆಯಲ್ಲಿ ನಿರ್ಮಾಣವಾಗುತ್ತದೆ, ಅಷ್ಟೇ ಏಕೆ ಎರಡು ಭಾಗಗಳಲ್ಲಿ ಮಾಡುತ್ತಾರೆ ಎಂಬುದೂ ಗೊತ್ತಿರಲಿಲ್ಲ. ಪ್ರಶಾಂತ್ ನೀಲ್ ಅವರಂಥ ನಿರ್ದೇಶಕ, ಯಶ್ ಅವರಂಥ ನಟ, ವಿಜಯ್ ಕಿರಗಂದೂರು ನಿರ್ಮಾಣದ ತಂಡದ ಜೊತೆ ಕೆಲಸ ಮಾಡುವ ಸಂಗತಿಯೇ ನನಗೆ ಖುಷಿ ಕೊಟ್ಟಿತ್ತು. ಹಾಗಾಗಿ ಈ ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡೆ’ ಎಂದು ನೆನಪಿಸಿಕೊಳ್ಳುತ್ತಾರೆ ಶ್ರೀನಿಧಿ.

ಈ ಸಿನಿಮಾವನ್ನು ಮೊದಲ ದಿನ ಮೊದಲ ಶೋ, ಕುಟುಂಬದವರ ಜೊತೆ ಕೂತುಕೊಂಡು ನೋಡಿದ್ದು ಅವರಿಗೊಂದು ಅವಿಸ್ಮರಣೀಯವಾದ ಗಳಿಗೆ. ‘ಈ ಸಿನಿಮಾದಲ್ಲಿ ಬ್ಯುಸಿಯಾಗಿದ್ದ ಆರು ವರ್ಷಗಳುದ್ದಕ್ಕೂ ನನ್ನ ಕುಟುಂಬದವರು ನನ್ನ ಬೆನ್ನಿಗಿದ್ದರು. ನನ್ನಷ್ಟೇ ಕಾತರದಿಂದ ಅವರು ಸಿನಿಮಾ ಬಿಡುಗಡೆಗೆ ಕಾಯುತ್ತಿದ್ದರು. ಕೊನೆಗೆ ಸಿನಿಮಾ ನೋಡಿ ಖುಷಿಪಟ್ಟರು.